# ಉಕುಸಾಂ

ರವಿ ನಾಡಿಗೇರ್



ಯುಗಾದಿಗಳ ಹಾದಿಯಲ್ಲಿ
ಇದ್ದ ಮರವನ್ನೆಲ್ಲ ಯಾರೊ ಕಡಿದಿದ್ದಾರೆ;
ನೆರಳಿಲ್ಲ, ಹಕ್ಕಿಗಳ ದನಿಯಿಲ್ಲ
ಬೆಟ್ಟ-ಘಟ್ಟಗಳ ಮೈಯಲ್ಲಿ ಹಸುರೇ ಇಲ್ಲ
ಬಿಸಿಲು, ಬಿಸಿಲೋ ಬಿಸಿಲು, ಸುಡುವ ಬಿಸಿಲು.
ಸರ್ಕಾರ ಅಲ್ಲಲ್ಲಿ ನೆಟ್ಟಿರುವ ಈ ಸಸಿಗಳೆಲ್ಲಾ ಬೆಳೆದು
ಹಸಿರು ಮೂಡುವುದಕ್ಕೆ
ಪ್ರಭವ- ವಿಭವ- ಶುಕ್ಲ- ಪ್ರಮೋದೂತಗಳ
ಎಣಿಸುತ್ತ ಕಾಯೋಣವೇ ಇನ್ನು ಮುಂದಕ್ಕೆ

-ಜಿ.ಎಸ್.ಶಿವರುದ್ರಪ್ಪ

ಕವಿ ಕಾಣ್ಕೆಗೆ ಹೊರತಾಗಿ ಯುಗಾದಿ ಬಗ್ಗೆ ಹೇಳುವುದು ಇನ್ನೇನಿದೆ? ಹಸಿರು ಮೂಡುವುದಕ್ಕೆ ಕಾಯುವುದರ ಹೊರತು ಬೇರೆ ದಾರಿ ಏನಿದೆ? ಹಸಿರು-ಹೊಸತಿನ ಮುಯೂರದ ಹಂಬಲ ನಿರಂತರವಾದುದು. ಆ ಹಂಬಲ ಮತ್ತು ಇಂದಿನದರ ಹುಡುಕಾಟ ಹಾಗೂ ಕಳಕೊಂಡುದರ ತಡಕಾಟಗಳ ಕೆಲ ಪ್ರಯತ್ನಗಳನ್ನು ಸಂಚಿಕೆಯಲ್ಲಿ ಗುರ್ತಿಸಬಹುದು. ಮಾರ್ಚ್ 8 ಮಹಿಳಾದಿನ. ಹಾಗಾಗಿ, ಈ ಸಂಚಿಕೆಯಲ್ಲಿ ಮಹಿಳಾ ದನಿಗಳು ಸಹಜವಾಗಿಯೇ ಹೆಚ್ಚಾಗಿವೆ.

ಸಹೃದರಿಗೆ 'ವಿಕೃತಿ' ನಾಮ ಸಂವತ್ಸರದ ಶುಭಾಶಯಗಳು.

-ಸಂಪಾದಕ